ಜೊತೆಯಾಗಿದ್ದ. ಮದುವೆಯಾದ ಮೇಲೆ ತಾನು ಕೆಲಸ ಮಾಡುವ ಸ್ಥಳಕ್ಕೆ ಹತ್ತಿರವಾಗಿದ್ದ ಕಡೆ ಮನೆ ಮಾಡಿಕೊಂಡ. ಊಹೆಗೂ ಮೀರಿ ಬೆಳೆದ ಬೆಂಗಳೂರಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದೇ ದೊಡ್ಡ ತಲೆನೋವಾಗಿದ್ದ ಪರಿಸ್ಥಿತಿಯಲ್ಲಿ ಕೇಶವನ ನಿರ್ಧಾರವನ್ನು ರಾಧಮ್ಮ ಪ್ರಶ್ನಿಸಲಿಲ್ಲ. ಕೇಶವ ಬರುವುದಕ್ಕೆ ಮೊದಲು ಒಬ್ಬಂಟಿಯಾಗಿ ಇರಲಿಲ್ಲವಾ? ನಮ್ಮ ಶಿಲುಬೆಯನ್ನು ನಾವೇ ಹೊರಬೇಕಲ್ಲದೆ ಅನ್ಯರಿಗೆ ಅದನ್ನು ದಾಟಿಸಲು ಬರುವುದಿಲ್ಲ. ಈಗೇನೋ ಪಾಠದ ಸಿದ್ಧತೆ, ಕಾಲೇಜು ಎಂದು ಬಿಡುವಿಲ್ಲದೆ ಸರಿಯುತ್ತಿದೆ ಕಾಲ. ಒಮ್ಮೆ ಮನೆಯ ಮೆಟ್ಟಿಲಿಳಿದರೆ ಮರೆತೇ ಹೋಗುತ್ತದೆ ಮನೆ. ಮುಂದೆ? ನಿವೃತ್ತಿಗೆ ಬಹಳ ವರ್ಷಗಳೇನು ಬಾಕಿ ಇಲ್ಲ. ನೋಡನೋಡುತ್ತಿದ್ದಂತೆ ಆ ದಿನ ಬಂದೇಬಿಡುತ್ತದೆ. ಓದುವುದು, ಬರೆಯುವುದು ಎಂದು ಏನೇ ಹಚ್ಚಿಕೊಂಡರೂ ಕಾಲ ಹೆಬ್ಬಂಡೆಯಂತೆ ತಲೆಯ ಮೇಲೆ ಭಾರವಾಗಿ ಕೂರುವುದು ತಪ್ಪುವುದಿಲ್ಲ. ರಾಧಮ್ಮ ಮುಂದೆಂದೋ ಬರುವ ಆ ದಿನಗಳನ್ನು ನೆನೆದು ಚಿಂತಿಸುವ ಅಗತ್ಯವೇ ಇಲ್ಲದಂತೆ ಒಮ್ಮೆ ಊರಿಗೆ ಹೋದಾಗ ಹೇಳಿದ್ದ ಮಾಧವ,



"ರಿಟೈರ್ ಆದ್ಮೇಲೆ ಇಲ್ಲಿಗೇ ಬರ್ತೀಯಲ್ವಾ ರಾಧತ್ತೆ? ನೋಡು, ಮೊದಲೇ ಹೇಳಿಟ್ಟಿದೀನಿ. ಆಮೇಲೆ ನಿನ್ನ ಕೇರಾಫ್ ಅಡ್ರೆಸ್ ಇಲ್ಲೇ..."

"ಮನೆ ಕಟ್ಟಿಸಿಯಾಗಿದೆ. ಬೇಕಾದ್ದು, ಬೇಡಾದ್ದು ತುಂಬಿಸಿಕೊಂಡಾಗಿದೆ. ಎಲ್ಲಾ ಬಿಟ್ಟು ಬರೋದು ಅಂದ್ರೆ ತಮಾಷಿ ಅಂದ್ಕಂಡಿದೀಯಾ?"

"ಬೆಂಗಳೂರುಪೇಟೇಲಿ ಬಾಡಿಗೆಗೆ ಜನ ಬರಲ್ವಾ? ಕೇಳ್ಕಂಡು ಬರ್ತಾರೆ. ಬ್ಯಾಡಪ್ಪಾ, ಮನೇನ ಮಾರಿ ಹಾಕಿದ್ರೆ ಸೈ. ಕೋಟಿಗಟ್ಲೆ ದುಡ್ಡು ನಿನ್ನ ಅಕೌಂಟಿಗೆ..."ರಾಧಮ್ಮನಿಗೆ ಮನೆ ಮಾರುವ ಮಾತು ಪಥ್ಯವಾಗಿರಲಿಲ್ಲ. ಯಾವತ್ತೂ ಸ್ವಂತ ಮನೆ ಅನ್ನುವುದು ಭದ್ರತೆಯ ಭಾವನೆ ಕೊಡುವ ಒಂದು ನೆಲೆ. ತಾನು ಎಲ್ಲೇ ಇರಲಿ, ತನ್ನದೊಂದು ಮನೆ ಇದೆ ಎನ್ನುವ ಸಮಾಧಾನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ.

"ನಾನಿರೋವರೆಗೆ ಆ ಮನೆ ಮಾರೋ ಪ್ರಶ್ನೆನೇ ಇಲ್ಲ. ಆಮೇಲೆ ನೀವ್‌ನೀವು ಏನು ಬೇಕಾದ್ರೂ ಮಾಡ್ಕೊಳ್ಳಿ. ಮನೆ ಮಾರಿ ಅಣ್ಣ, ತಮ್ಮ ದುಡ್ಡು ಹಂಚ್ಕಳ್ಳಿ..." ಬೇಜಾರಾಗಿತ್ತು ಮಾಧವನಿಗೆ.

"ರಾಧತ್ತೇ, ನಿನ್ನ ದುಡ್ಡಿಗೆ ಬಾಯಿ ಕಳ್ಕಂಡು ಮನೆ ಮಾರೋ ಮಾತು ಆಡಿದೆ ಅಂದ್ಕಂಡಿದೀಯಾ? ಸತ್ಯ ಹೇಳ್ಲಾ ರಾಧತ್ತೆ? ಟೀವೀಲಿ ದಿವಸಾ ಅನ್ನೋ ಹಾಗೆ ನೋಡ್ತಿರ್ತೀವಲ್ಲ, ಒಂಟಿ ಹೆಂಗಸ್ರು, ವಯಸ್ಸಾದೋರು ಅಂದ್ರೆ ತಲೆ ಒಡೆದು ದೋಚೋರು ನಿಮ್ಮ ಬೆಂಗಳೂರಲ್ಲಿ ಭಾಳ ಜನ ಹುಟ್ಕಂಡಿದಾರಂತೆ. ಯಾರೋ ಗುರ್ತು, ಪರಿಚಯ ಇಲ್ದಿರೋರಲ್ಲ, ದಿನಾ ಬಂದು ಹೋಗೋ ಗುರುತಿನ ಜನಾನೇ ಇಂತಾ ಕೆಲಸ ಮಾಡೋಕೆ ಹಿಂದೆ ಮುಂದೆ ನೋಡಲ್ವಂತೆ. ಅಂತಾದ್ದೆಲ್ಲಾ ನೋಡ್ತಿದ್ರೆ ನಂಗೆ ಹೆದರಿಕೆಯಾಗುತ್ತೆ."

"ಅತಿಯಾಯ್ತು ನಿಂದು..." ಎನ್ನುತ್ತಾ ನಕ್ಕಿದ್ದರು ರಾಧಮ್ಮ.

"ರಾಧತ್ತೇ, ನೀನು ನಮಗೆಲ್ಲಾ ಎಷ್ಟು ಉಪಕಾರ ಮಾಡಿದ್ದಿ, ಮಾಡ್ತಿದ್ದಿ, ನಿನ್ನ ಸೇವೆ ಮಾಡಿ ಈ ಋಣಾನ ಸ್ವಲ್ಪಾನಾದ್ರೂ ತೀರ್ಸೋದು ಬ್ಯಾಡ್ವಾ? ನಮ್ಮನ್ನೆಲ್ಲಾ ಮಕ್ಕಳು ಅಂತಿ. ವಯಸ್ಸಾದ್ಮೇಲೆ ಮಕ್ಕಳ ಮನೇಗೆ ಬಂದಿರ್ದೆ ಒಂಟಿಯಾಗಿ ಯಾಕೆ ಕೂಳು ಬೇಯಿಸ್ಕೊಂಡು ತಿನ್ಬೇಕು?" ಆಗಿನ್ನೂ ನಡಿಗೆ ಕಲಿತಿದ್ದ ತನ್ನ ಮಗನನ್ನು ಎತ್ತಿಕೊಂಡು ಬಂದು ರಾಧಮ್ಮನ ತೊಡೆಯ ಮೇಲೆ ಕೂರಿಸಿದ್ದ ಮಾಧವ,